ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ದಿನೇಶ್ ಮಹೇಶ್ವರಿ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್

ಮೆ:ಆಟೋಮೋಟಿವ್ ಅಕ್ಸ್‌ಲ್ಸ್ ಅಮಿಟೆಡ್ –ವಿರುದ್ಧ ಎನ್. ಸಂದೇಶ್ಕುಮಾರ್ ಮತ್ತು ಇನ್ನೊಬ್ಬರು

ರಿಟ್ ಅಪೀಲುಸಂಖ್ಯೆ: 1418-1419/2018 (ಎಲ್-ಆಞಎಸ್), ದಿನಾಂಕ 29 ನೇ ಮೇ, 2018.

ತೀರ್ಪು

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್

ಈ ರಿಟ್ ಅಪೀಲಿನಲ್ಲಿ ಅಪೀಲುದಾರ-ಆಡಳಿತ ಮಂಡಳಿಯು, ಅಪೀಲುದಾರರ ರಿಟ್ ಅರ್ಜಿಸಂಖ್ಯೆ: 12726 ಮತ್ತು 12727/2018 (ಎಲ್ ಆಞಎಸ್) ರಲ್ಲಿ, ಮಾನ್ಯ ಏಕಪೀಠ ನ್ಯಾಯಾಧೀಶರು ನೀಡಿದದಿನಾಂಕ: 27.03.2018 ರ ತೀರ್ಪನ್ನು ಮತ್ತು ಆದೇಶವನ್ನು ಪ್ರಶ್ನಿಸಿದ್ದು, ಆ ಮೂಲಕ ಉಲ್ಲೇಖಸಂಖ್ಯೆ: 12/2017 ಮತ್ತು 13/2017 ರಲ್ಲಿ, ಮೈಸೂರಿನ ಕಾರ್ಮಿಕ ನ್ಯಾಯಾಲಯವು ನೀಡಿದದಿನಾಂಕ: 03.03.2018 ರ ಸಾಮಾನ್ಯ ಆದೇಶವನ್ನು ಎತ್ತಿಹಿಡಿದು ಸದರಿ ರಿಟ್ ಅರ್ಜಿಯನ್ನು ವಜಾಗೊಳಿಸಲಾಗಿದೆ.ಸದರಿ ಆದೇಶದ ಮೂಲಕ, ಕಾರ್ಮಿಕ ನ್ಯಾಯಾಲಯದ ಮಾನ್ಯ ಪೀಠಾಸೀನ ಅಧಿಕಾರಿಯು, ಕೈಗಾರಿಕಾ ವಿವಾದದ ಗುಣಾರ್ಹತೆಗಳನ್ನು ಪುಸ್ತಾಪಿಸುವ ಮುಂಚೆ, ಕೆಲವು ಆಕ್ಷೇಪಗಳನ್ನು ಪ್ರಾಥಮಿಕ ವಿಷಯಗಳನ್ನಾಗಿ ಪರಿಗಣಿಸಬೇಕೆಂಬ ಅಪೀಲುದಾರ-ಆಡಳಿತ ಮಂಡಳಿಯ ಅಹವಾಲನ್ನು ತಳ್ಳಿಹಾಕಿದ್ದಾರೆ.

2. ಈ ಮೊಕದ್ದಮೆಯ ಸಂಕ್ಷಿಪ್ತ ಸಂಗತಿಗಳು ಈ ಮುಂದಿನಂತಿವೆ:

(ಎ) ಇದರಲ್ಲಿ ಹೇಳಲಾದಂತೆ, ಪ್ರತ್ಯರ್ಜಿದಾರರ ಸೇವೆಯನ್ನು, ಯಾವುದೇ ಸಮರ್ಥನೆಯಿಲ್ಲದೆ ಕೊನೆಗೊಳಿಸಲಾಗಿದೆ.ಇಬ್ಬರೂ ಪ್ರತ್ಯರ್ಜಿದಾರರು ಕೈಗಾರಿಕಾ ವಿವಾದವನ್ನು ಎತ್ತಿದ್ದು, ಅದನ್ನು ಕೈಗಾರಿಕಾ ವಿವಾದಗಳ ಅಧಿನಿಯಮ, 1947 ರ [ಕೈ.ವಿ.ಅಧಿನಿಯಮ, 1947] ಪ್ರಕರಣ 101) (ಸಿ) ಅಡಿಯಲ್ಲಿ ಕರ್ನಾಟಕ ಸರ್ಕಾರವು ಉಲ್ಲೇಖಿಸಿದೆ.ಅಂಥ ಉಲ್ಲೇಖದ ಆಧಾರದ ಮೇಲೆ, ಮೈಸೂರಿನ ಕಾರ್ಮಿಕ ನ್ಯಾಯಾಲಯವು ಅದನ್ನು ಉಲ್ಲೇಖಸಂಖ್ಯೆ: 12/2017 ಮತ್ತು 13/2017 ಗಳನ್ನಾಗಿ ನೋಂದಾಯಿಸಿದೆ.

(ಬಿ) ಇಬ್ಬರೂ ಖಾಸಗಿ ಪ್ರತ್ಯರ್ಜಿದಾರರು ಅವರವರ ಕ್ಲೇಮುಗಳ ಹೇಳಿಕೆಯನ್ನು ಸಲ್ಲಿಸಿದ್ದಾರೆ ಮತ್ತು ಅಪೀಲುದಾರ-ಆಡಳಿತ ಮಂಡಳಿಯು ತನ್ನ ಪತಿ ಹೇಳಿಕೆಗಳನ್ನು ಸಲ್ಲಿಸಿದೆ.ಪ್ರತ್ಯರ್ಜಿದಾರರು, ವ್ಯವಸ್ಥಾಪನಾ ಸಿಬ್ಬಂದಿ ವರ್ಗದ ಭಾಗವಾಗಿ, ಅವರ ಹುದ್ದೆಯನ್ನು ಲೆಕ್ಕಿಸದೆ, ಕೈ.ವಿ. ಅಧಿನಿಯಮ, 1947 ರ ಪ್ರಕರಣ 2 (ಎಸ್) ಅಡಿಯಲ್ಲಿ " ಕಾರ್ಮಿಕ " ಪದದ ಪರಿಭಾಷೆಗೆ ಸರಿಹೊಂದುವುದಿಲ್ಲ.ಸದರಿ ಆಕ್ಷೇಪವನ್ನು, ಅದು ವಿಷಯದ ಮೂಲವಾಗಿರುವುದರಿಂದ ಮತ್ತು ಅದರ ಪರಿಣಾಮವನ್ನು ನಿರ್ಧರಿಸುವುದರಿಂದ, ಅದನ್ನು ಪ್ರಾಥಮಿಕ ವಿವಾದವನ್ನಾಗಿ ಪರಿಗಣಿಸಿ ವಿಚಾರಣೆ ನಡೆಸಬೇಕೆಂದು ಹೇಳಿದ್ದಾರೆ.

(ಸಿ) ಎದುರುದಾರರ ವಾದಗಳನ್ನು ಗಮನದಲ್ಲಿರಿಸಿಕೊಂಡು, ಕಾರ್ಮಿಕ ನ್ಯಾಯಾಲಯವು, ಈ ಕೆಳಗಿನಂತೆ ಅದರ ತೀರ್ಮಾನಕ್ಕಾಗಿ ಆಕ್ಷೇಪವನ್ನು ರೂಪಿಸಿದೆ:

" ಮಾನ್ಯ ನ್ಯಾಯವಾದಿ ಶ್ರೀ ಎನ್.ಜಿ.ಪಿ.ಯವರು ಅವಲ ೦ ಬಿಸಿದ ನಿರ್ಣಯಗಳಲ್ಲಿ, ಮಾನ್ಯ ಉಚ್ಚ ನ್ಯಾಯಾಲಯವು ನಿರ್ಧರಿಸಿದ ತತ್ವಗಳ ಅಭಿಪ್ರಾಯದಲ್ಲಿ, ಮತ್ತು ಸರ್ಕಾರವು ನ್ಯಾಯನಿರ್ಣಯಕ್ಕಾಗಿ ಕಳುಹಿಸಿದ ಉಲ್ಲೇಖಾ ೦ ಶ ಸಂಖ್ಯೆ.1 ನ್ನು ಈ ನ್ಯಾಯಾಲಯವು ಗಮನದಲ್ಲಿರಿಸಿಕೊಂಡು, ಉಲ್ಲೇಖಾಂಶ ಸಂಖ್ಯೆ .1 ನ್ನು ಕುರಿತು, ಇತರ ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳುವ ಮುಂಚೆ ಮೊದಲಲ್ಲೇ ನ್ಯಾಯನಿರ್ಣಯಿಸಬೇಕೇ ಅಥವಾ ಇಲ್ಲವೇ, ನ್ಯಾಯನಿರ್ಣಯಕ್ಕಾಗಿ ಕಳುಹಿಸಿದ ಎಲ್ಲಾ ಅಂಶಗಳನ್ನು ಕುರಿತು ಒಂದೇ ಸಲಕ್ಕೆ ನ್ಯಾಯಾಲಯವು ಉತ್ತರಿಸಬೇಕಾದ ಅಗತ್ಯವಿದೆಯೇ? "

(ಡಿ) ಕಾರ್ಮಿಕ ನ್ಯಾಯಾಲಯವು, ಎರಡೂ ಕಡೆಯ ವಾದವನ್ನು ಆಲಿಸಿ, ಅದರದಿನಾಂಕ: 03.03.2018 ರ ಸಾಮಾನ್ಯ ಆದೇಶದ ಮೂಲಕ, ಆಡಳಿತ ಮಂಡಳಿಯ ವಾದವನ್ನು, ಎಂದರೆ, ಇದರಲ್ಲಿನ ಪ್ರತ್ಯರ್ಜಿದಾರರು, ಪ್ರಾಥಮಿಕ ವಿಷಯವಾಗಿ, ಕೈ.ವಿ. ಅಧಿನಿಯಮ, 1947 ರ 2 (ಎಸ್) ಪ್ರಕರಣದ ಅಡಿಯಲ್ಲಿ " " 1 ಕಾರ್ಮಿಕ " ಪದದ ಪರಿಭಾಷೆಯಲ್ಲಿ ಬರುವರೇ ಎಂಬ ವಿಷಯವನ್ನು ಕೈಗೆತ್ತಿಕೊಳ್ಳಬೇಕೆಂಬ ಅದರ ಮನವಿಯನ್ನು ತಳ್ಳಿಹಾಕಿದೆ.ಇದನ್ನು ಆಡಳಿತ ಮಂಡಳಿಯು, ರಿಟ್ ಅರ್ಜಿಸಂಖ್ಯೆ: 12726 ಮತ್ತು 12727/2018 (ಎಲ್ ಆರ್ಇಎಸ್) ರಲ್ಲಿ ಪ್ರಶ್ನಿಸಿದೆ ಮತ್ತು ಈ ನ್ಯಾಯಾಲಯದ ಮಾನ್ಯ ಏಕಪೀಠ ನ್ಯಾಯಾಧೀಶರು, ಕಾರ್ಮಿಕ ನ್ಯಾಯಾಲಯದ ಆದೇಶಕ್ಕೆ ಸಮ್ಮತಿಸಿ, ರಿಟ್ ಅರ್ಜಿಗಳನ್ನು ವಜಾಗೊಳಿಸಿದ್ದಾರೆ.ಮಾನ್ಯ ಏಕಪೀಠ ನ್ಯಾಯಾಧೀಶರ ಈ ಆದೇಶವನ್ನು, ಪ್ರಸ್ತುತ ರಿಟ್ ಅಪೀಲುಗಳಲ್ಲಿ ಪ್ರಶ್ನಿಸಲಾಗಿದೆ.

3. ಅಪೀಲುದಾರ-ಆಡಳಿತ ಮಂಡಳಿ ಪರ ಮಾನ್ಯ ನ್ಯಾಯವಾದಿಯು, ಸರ್ವೋಚ್ಚ ನ್ಯಾಯಾಲಯವು, ತೀರ್ಪುಗಳ ಸರಣಿಯಲ್ಲಿ ವ್ಯಾಖ್ಯಾನಿಸಿದಂತೆ, ಕೈ.ವಿ. ಅಧಿನಿಯಮ, 1947 ರ 2 (ಎಸ್) ಪ್ರಕರಣದ ಅಡಿಯಲ್ಲಿ " ಕಾರ್ಮಿಕ " ಪದದ ಪರಿಭಾಷೆಯೊಳಗೆ ಪ್ರತ್ಯರ್ಜಿದಾರರು ಬರುತ್ತಾರೆಯೇ ಎಂಬ ಪ್ರಶ್ನೆ ಕುರಿತು ದೊರೆಯುವ ಉತ್ತರದ ಮೇಲೆ ಅವಶ್ಯವಾಗಿ ಅವಲಂಬಿತವಾಗುತ್ತದೆ ಎಂಬ ಮುಖ್ಯ ವಾದವನ್ನು ಮಂಡಿಸಿದ್ದಾರೆ.ಎಕ್ಸ್ಪ್ರೆಸ್ (ಪ್ರೈ) ಅ., ಮದ್ರಾಸ್ ಇದರ ಆಡಳಿತ ಮಂಡಳಿ – · 9 ವಿರುದ್ಧ ಕಾರ್ಮಿಕರು ಮತ್ತು ಇತರರು ', ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದಂತೆ, ಕೈಗಾರಿಕಾ ನ್ಯಾಯಾಧಿಕರಣ/ಕಾರ್ಮಿಕ ನ್ಯಾಯಾಲಯವು, ಕೈಗಾರಿಕೇತರ ವಿವಾದದ ಮೇಲೆ ಅಧಿಕಾರವ್ಯಾಪ್ತಿಯನ್ನು ಪರಿಭಾವಿಸಲು ಮುಂದುವರಿದಿದ್ದರೆ, ಅದನ್ನು ಪ್ರಶ್ನಿಸಬಹುದಾಗಿತ್ತು ಎಂದು ಅವರು ನಿವೇದಿಸಿಕೊಂಡಿದ್ದಾರೆ.

4. ಅಪೀಲುದಾರ-ಆಡಳಿತ ಮಂಡಳಿ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ನಾವು ಆಲಿಸಿದ್ದೇವೆ.ನಾವು, ದಾಖಲೆಗಳನ್ನು, ಮಾನ್ಯ ಏಕಪೀಠ ನ್ಯಾಯಾಧೀಶರ ಪ್ರಶ್ನಿತ ತೀರ್ಪನ್ನು ಹಾಗೂ ಕಾರ್ಮಿಕ ನ್ಯಾಯಾಲಯವು ಮಾಡಿದ ಆದೇಶವನ್ನು ಸಹ ಅವಗಾಹನೆ ಮಾಡಿದ್ದೇವೆ.

5. ಕೈಗಾರಿಕಾ ವಿವಾದಗಳ ತ್ವರಿತ ನ್ಯಾಯನಿರ್ಣಯಕ್ಕಾಗಿ, ಅವುಗಳನ್ನು ಸಿವಿಲ್ ನ್ಯಾಯಾಲಯಗಳ ಹೊರಗಿಟ್ಟು, ಕೈ.ವಿ. ಅಧಿನಿಯಮ, 1947 ರ ಉಪಬಂಧಗಳ ಅಡಿಯಲ್ಲಿ ಕಾರ್ಮಿಕ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.ಸಾಮಾನ್ಯವಾಗಿ, ದಾಖಲೆಯಲ್ಲಿರುವ ವಿಷಯದ ಆಧಾರದ ಮೇಲೆ ನಿರ್ಧರಿಸಬಹುದಾದ ವಿಷಯವನ್ನು, ಮುಖ್ಯ ವಿಷಯದ ನಿರ್ಧಾರವು ಅದಕ್ಕೆ ಉತ್ತರಿಸುವುದನ್ನು ಆಧರಿಸಿದಾಗ, ಪ್ರಾಥಮಿಕ ವಿಷಯವಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬಹುದು.ಒಂದು ವಿವಾದವು, ವಿಚಾರಣೆಯ ನಂತರ ಮಾತ್ರವೇ ಸಾಬೀತುಪಡಿಸಬಹುದಾಗಿರುವ ಸಂಗತಿಗಳ ವಿವಾದಿತ ಆಕ್ಷೇಪಣೆಗಳನ್ನು ಒಳಗೊಂಡಿರುವಲ್ಲಿ, ಮುಖ್ಯ ವಿಷಯವನ್ನೇ ವಿಚಾರಣೆಗೆ ನಿಗದಿಪಡಿಸಬೇಕು ಎಂಬುದು ನ್ಯಾಯಾಲಯದ ದೃಢ ಅಭಿಪ್ರಾಯವಾಗಿದೆ.

6. ಪ್ರಸ್ತುತ ಸಂದರ್ಭದಲ್ಲಿ, ಪ್ರಶ್ನೆಯಲ್ಲಿರುವ ಕೈಗಾರಿಕಾ ವಿವಾದವನ್ನು ನಿರ್ಧರಿಸಲು ರಾಜ್ಯ ಸರ್ಕಾರವು ಉಲ್ಲೇಖಿಸಿದೆ.ಕೈ.ವಿ. ಅಧಿನಿಯಮ, 1947 ರ 2 (ಎಸ್) ಪ್ರಕರಣದ " ಕಾರ್ಮಿಕ " ಪದದ ಅರ್ಥ ವ್ಯಾಪ್ತಿಯೊಳಗೆ ಪ್ರತ್ಯರ್ಜಿದಾರರು ಬರುತ್ತಾರೆಯೇ ಎಂಬ ವಿವಾದವು, ವಿಶೇಷವಾಗಿ, ಕ್ಲೇಮುದಾರರು ಆಡಳಿತ ಮಂಡಳಿಯ ಈ ಸಮರ್ಥನೆಯನ್ನು ಪ್ರಶ್ನಿಸಿದಾಗ, ಕಾನೂನು ಮತ್ತು ವಾಸ್ತವ ಸಂಗತಿಯ ಸಂಮಿಶ್ರ ಪ್ರಶ್ನೆಯಾಗಿದೆ.ಸದರಿ ವಿವಾದವನ್ನು ರುಜುವಾತುಗಳಿಲ್ಲದೆ ಉತ್ತರಿಸಲಾಗುವುದಿಲ್ಲ, ಅದನ್ನು ವಿಚಾರಣೆಯಲ್ಲಿರುವ ಪಕ್ಷಕಾರರು ಇನ್ನೂ ಸಲ್ಲಿಸಬೇಕಿದೆ.ಈ ಕೈಗಾರಿಕಾ ವಿವಾದವು ಎರಡು-ವಿಭಜಿತ-ಹಂತಗಳಲ್ಲಿ ಎಂದರೆ ( ಎ) ಪ್ರಾಥಮಿಕ ವಿವಾದವನ್ನು ನಿರ್ಧರಿಸಲು ಕಿರು ವಿಚಾರಣೆ ಮತ್ತು (ಬಿ) ಮುಖ್ಯ ವಿಷಯವನ್ನು ನಿರ್ಧರಿಸಲು ಪೂರ್ಣ ಪ್ರಮಾಣದ ವಿಚಾರಣೆಯನ್ನು ಎದುರಿಸುವುದು ಯುಕ್ತವಾದುದಲ್ಲ.

7. ಮಾನ್ಯ ಏಕಪೀಠ ನ್ಯಾಯಾಧೀಶರು ಮತ್ತು ಕಾರ್ಮಿಕ ನ್ಯಾಯಾಲಯದ ಪೀಠಾಸೀನ ಅಧಿಕಾರಿಯು, ಇದರಲ್ಲಿನ ಪ್ರತ್ಯರ್ಜಿದಾರರ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಪ್ರಶ್ನೆಯನ್ನು ಏಕೆ ಪ್ರಾಥಮಿಕ ವಿಷಯವನ್ನಾಗಿ ವಿಚಾರಣೆ ಮಾಡಬೇಕಾದ ಅಗತ್ಯವಿಲ್ಲ ಎಂಬುದಕ್ಕೆ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳಿಂದ ಸಮರ್ಥಿತವಾದ ಸಮಂಜಸ ಕಾರಣಗಳನ್ನು ನೀಡಿದ್ದಾರೆ.ಆಂತರಿಕ ನ್ಯಾಯಾಲಯ ಅಪೀಲುಗಳಲ್ಲಿ ಹಸ್ತಕ್ಷೇಪವನ್ನು ಅಗತ್ಯಪಡಿಸುವಂಥ ಯಾವುದೇ ಅಧಿಕಾರವ್ಯಾಪ್ತಿ ಸಂಬಂಧಿತ ಲೋಪವು ನಮಗೆ ಕಂಡುಬಂದಿಲ್ಲ.

ತತ್ಪರಿಣಾಮವಾಗಿ, ಈ ರಿಟ್ ಅಪೀಲುಗಳನ್ನು ವಜಾಗೊಳಿಸಲಾಗಿದೆ.

ಇತ್ಯರ್ಥದಲ್ಲಿರುವ ವಾದಕಾಲೀನ ಅರ್ಜಿಯನ್ನು ಸಹ ವಜಾಗೊಳಿಸಲಾಗಿದೆ.